ಗುರಿಯಷ್ಟೇ ಅಲ್ಲ, ಅದನ್ನು ಹೊಂದುವ ಮಾರ್ಗದ ಕಡೆಗೂ ಗಮನ ಕೊಡಬೇಕೆಂಬುದು. ನಾನು ಯಾರಿಂದ ಈ ಪಾಠ ಕಲಿತೆನೋ ಆ ಮಹಾತ್ಮನ ಸ್ವಂತ ಜೀವನವೇ ಈ ಒಂದು ಪ್ರಮುಖ ತತ್ತ್ವಕ್ಕೆ ಉದಾಹರಣೆಯಂತಿತ್ತು. ಈ ಒಂದು ತತ್ತ್ವದಿಂದಲೇ ನಾನು ಅನೇಕ ಪಾಠಗಳನ್ನು ಕಲಿಯುತ್ತಿದ್ದೇನೆ. ವಿಜಯದ ಎಲ್ಲಾ ರಹಸ್ಯವೂ ಆ ತತ್ತ್ವದಲ್ಲಿ ಅಡಗಿದೆ ಎಂದು ನನಗೆ ಭಾಸವಾಗುತ್ತಿದೆ. ಗುರಿಯ ಕಡೆಗೇ ನಮಗೆ ಹೆಚ್ಚು ಸೆಳೆತ. ಇದೇ ನಮ್ಮ ಜೀವನದ ಅತಿ ದೊಡ್ಡ ದೋಷ. ಗುರಿಯು ನಮಗೆ ಎಷ್ಟು ಹೆಚ್ಚು ಆಕರ್ಷಕವೂ, ಮೋಹಕವೂ, ಮನಸ್ಸಿನ ಪರಿಧಿಯಲ್ಲಿ ಬೃಹದಾಕಾರವೂ ಆಗುವುದೆಂದರೆ, ಸಣ್ಣಪುಟ್ಟ ವಿಷಯಗಳನ್ನು ನಾವು ಸಂಪೂರ್ಣವಾಗಿ ನಿರ್ಲಕ್ಷಿಸುತ್ತೇವೆ."

**ಅಂಕಗಳಿಕೆಯ ಭ್ರಮೆ :** ಜ್ಞಾನಕ್ಕಾಗಿ ಜ್ಞಾನವನ್ನು ಪಡೆಯುವ ಹಂಬಲದಲ್ಲಿ, ತನ್ನನ್ನು ತಾನು ಅರಿಯುವುದು ಮುಖ್ಯವಾದ ಅಂಶ. ವಿದ್ಯಾಭ್ಯಾಸದಲ್ಲಿ ಈಚೆಗೆ ಅಂಕಗಳಿಕೆಯೇ ಮಾನದಂಡವಾಗಿ ಪರಿಣಮಿಸಿರುವುದು, ಅದಕ್ಕಾಗಿಯೇ ದಿನದ ಬಹುಭಾಗವನ್ನು ವಿದ್ಯಾರ್ಥಿಗಳು ಓದು, ಟ್ಯೂಷನ್ನುಗಳಲ್ಲಿಯೇ ಕಳೆಯುವುದು ಎಷ್ಟರ ಮಟ್ಟಿಗೆ ಸರಿ? ಹೀಗೆ ಅಂಕಗಳಿಕೆಯಲ್ಲಿ ಪರಿಣತರಾಗದವರು ಪ್ರಪಂಚದಲ್ಲಿ ದಾರಿತಪ್ಪುತ್ತಾರಲ್ಲವೇ? ಅಂತಹವರಿಗೂ ತಾಯಿ-ತಂದೆಗಳಿಂದ, ಉಪಾಧ್ಯಾಯರಿಂದ ಸರಿಯಾದ ಪ್ರೇರಣೆ ದೊರೆತಲ್ಲಿ, ಅವರೂ ಪ್ರಗತಿ ಸಾಧಿಸಲು ಸಾಧ್ಯವಿದೆ. ಆದರೆ ಎಷ್ಟು ಜನ ಉಪಾಧ್ಯಾಯರು ಮಕ್ಕಳ ಕೋಮಲ ಮನಸ್ಸಿಗೆ ಪ್ರೇರಣೆ ನೀಡುವ ತಾಳ್ಮೆ ಹೊಂದಿದ್ದಾರೆ? ಅವರಲ್ಲಿ ಎಷ್ಟು ಮಂದಿ ಜ್ಞಾನಾನ್ವೇಷಿಗಳು? ಹಾಗೂ ಮಕ್ಕಳ ಮೇಲೆ ಮತ್ತು ತಮ್ಮ ವೃತ್ತಿಯ ಮೇಲೆ ಪ್ರೀತಿ ಹೊಂದಿರುವವರು? ಉಪಾಧ್ಯಾಯರಲ್ಲಿಲ್ಲದ ಜ್ಞಾನದ ಹಂಬಲ ವಿದ್ಯಾರ್ಥಿಗಳಿಗೆ ಬಂದೀತಾದರೂ ಹೇಗೆ?

**ಕಲಿಯುವಿಕೆಯ ಮರ್ಮ:** ಒಟ್ಟಿನಲ್ಲಿ 'ಕಲಿಯುವಿಕೆ' ಎಂದರೆ **ಮಕ್ಕಳಲ್ಲಿರುವ ಕ್ರಿಯಾಶೀಲ ಕುತೂಹಲಕ್ಕೆ ನೀರೆರೆಯುವುದು, ಪ್ರಶ್ನಿಸುವುದು, ಹಂಚಿಕೊಳ್ಳುವುದು** ಮತ್ತು **ಉತ್ತಮಗೊಳ್ಳುವುದು.** "ಯಾವುದಾದರೊಂದು ರೀತಿಯಲ್ಲಿ ನಮ್ಮ ದೈನಂದಿನ ಜೀವನಕ್ಕೆ ಸಂಬಂಧಿಸದ ಕಲಿಕೆಯನ್ನು 'ವಿದ್ಯಾಭ್ಯಾಸ' ವೆಂದು ಕರೆಯುವುದಕ್ಕೆ ಆಗುವುದಿಲ್ಲ" ಎನ್ನುತ್ತಾನೆ ಬೂಕರ್ ಟಿ. ವಾಷಿಂಗ್‌ಟನ್. ಬರಿಯ ಸಿಲಬಸ್ ಕೇಂದ್ರಿತವಾದ, ಪಠ್ಯ-ಟ್ಯೂಷನ್-ಗೈಡ್ ಆಧಾರಿತವಾದ, ಬ್ಯಾಂಕ್ ಡಿಪಾಸಿಟ್ ತರಹದ ಶಿಕ್ಷಣ ವ್ಯವಸ್ಥೆಯಲ್ಲಿ (ಅಧ್ಯಾಪಕರು ವರ್ಷವಿಡೀ ಡಿಪಾಸಿಟ್ ಮಾಡಿದ ಜ್ಞಾನವನ್ನು ಪರೀಕ್ಷೆಯಲ್ಲಿ ಹಿಂದಕ್ಕೆ ತೆಗೆಯುವ ರೀತಿಯ ವ್ಯವಸ್ಥೆ) ಅರಿವಿನ ಒಂದು ಮುಖವನ್ನು ಮಾತ್ರವೇ ನಾವು ಬಳಸುತ್ತಿದ್ದೇವೆ, ಪ್ರಕೃತಿಯ ಬಗ್ಗೆ ಅರಿಯುವುದನ್ನು ಬಿಟ್ಟುಬಿಟ್ಟಿದ್ದೇವೆ. ಇದನ್ನು ನಿರೂಪಿಸಲು ಒಂದು ಚಿಕ್ಕ ಪ್ರಹಸನ ಇದೆ: ಆಕಾಶದೆಡೆ ವಿಸ್ಮಯದಿಂದ ನೋಡುತ್ತ ನಡೆಯುತ್ತಿದ್ದ ವಿಜ್ಞಾನಿಯೊಬ್ಬ ಪಾಳುಬಾವಿಯೊಂದರಲ್ಲಿ ಬಿದ್ದುಬಿಟ್ಟ. ಆತನನ್ನು ಎತ್ತಿದ ಒಬ್ಬ ರೈತ ಅವನನ್ನು ಸಮಾಧಾನಪಡಿಸಿ, "ನೀವು ಏನು ಕೆಲಸ ಮಾಡುತ್ತಿದ್ದೀರಿ?" ಎಂದು ಕೇಳಿದ. ತಾನು ಖಗೋಳಜ್ಞ ಎಂದಾಗ, "ಇನ್ನು ಮೇಲೆ ಸ್ವಲ್ಪ ಭೂಗೋಳವನ್ನು ಕೂಡ ಕಲಿತುಕೊಳ್ಳಿ " ಎಂದು ಹೇಳಿಕಳಿಸಿದ!

**ಅಂತರಂಗದ ಅದ್ಭುತ 'ನಾನು' :** ಎರಡು ವರ್ಷವಾಗುವಾಗ ಮಗುವಿಗೆ 'ನಾನು', 'ನೀನು', 'ಅವನು', 'ಅವಳು' ಎಂಬ ಜ್ಞಾನ ಉದಿಸುತ್ತದೆ. 'ನಾನು' ವಿಗೆ ನಾನಾ ತೆರನಾದ ಉಪಾಧಿಗಳು ಸೇರಿ ವ್ಯಕ್ತಿತ್ವ ನಿರ್ಮಾಣವಾಗುತ್ತದೆ. ಆದರೆ, ನಮ್ಮ ಗಮನಕ್ಕೆ ಬರುವುದು ಕಣ್ಣು, ಬಾಯಿ ಮೊದಲಾದವುಗಳ ಚಲನೆ, ನಿಲುವು, ಮೈಬಣ್ಣ – ಇವು ಮಾತ್ರ. ನಮ್ಮ ಯೋಚನೆ, ಭಾವನೆ, ಕಲ್ಪನೆ, ಸ್ಮೃತಿ, ಆಸೆ, ಅನಿಸಿಕೆ, ರಾಗ-ದ್ವೇಷಗಳು ಅಗೋಚರವಾಗಿಯೇ ಉಳಿಯುತ್ತವೆ. ತೋರಿಕೆಯ ಜಗತ್ತಿನಲ್ಲೇ ಜೀವಿಸುವ ವ್ಯಕ್ತಿಯ ಹಿನ್ನೆಲೆಯಲ್ಲಿ, ಗೋಚರಿಸದ ಈ 'ನಾನು' ಮತ್ತು ಅದನ್ನು ಸುತ್ತುವರೆದ ಯೋಚನೆ-ಭಾವನೆ-ಸಂಸ್ಕಾರಗಳು ಅಡಗಿವೆ. ಶ್ರೀ ಕುವೆಂಪು ತಮ್ಮ ಕವನವೊಂದರಲ್ಲಿ ಈ 'ನಾನು' ಎಂಬುದನ್ನು ತಿಳಿಯುವ ಆವಶ್ಯಕತೆಯನ್ನು ಹೀಗೆ ಹೇಳಿದ್ದಾರೆ:

**ನೊಣ ಮೀಸೆಯ ಹುಳು ಹೆಜ್ಜೆಯ ಎಣಿಸುವ ಬಿಜ್ಜೆಯ ಬಲ್ಲ**
**ತನ್ನಾತ್ಮವ ತಾನರಿಯುವ ಸಾಧನೆಯೊಂದನು ಒಲ್ಲ**
**ಅನ್ವೇಷಣೆ ಅನ್ವೇಷಣೆ ಸುಖಿಸಲು ಪುರುಸೊತ್ತಿಲ್ಲ**
**ತಿಳಿದೂ ತಿಳಿದೂ ತಿಳಿದೂ ಕೊನೆಗೇನೂ ಗೊತ್ತಿಲ್ಲ !**

**ಅಂತಶ್ಶಕ್ತಿ:** ಜಗದ್ವಿಖ್ಯಾತ ವಿಜ್ಞಾನಿ ಅಲೆಕ್ಸಿಸ್ ಕೆರೆಲ್ ಹೀಗೆನ್ನುತ್ತಾರೆ: "ಜೀವಿಯಲ್ಲಿರುವ ಅದ್ಭುತವೂ ಶಕ್ತಿಶಾಲಿಯೂ ಆದ ಮನಸ್ಸನ್ನು ಶರೀರಶಾಸ್ತ್ರಜ್ಞರೂ, ಅರ್ಥಶಾಸ್ತ್ರಜ್ಞರೂ ನಿರ್ಲಕ್ಷಿಸಿದ್ದಾರೆ. ವೈದ್ಯರ ಗಮನವೂ ಆ ಕಡೆಗೆ ಹರಿದಿಲ್ಲ." ಅಮೆರಿಕೆಯ ಮನೋವಿಜ್ಞಾನಿ ಸ್ಮೈಲಿ ಬ್ರಂಟನ್, "ನಮ್ಮ ಮನಸ್ಸಿನ ಆಳದ ಸ್ತರಗಳಲ್ಲಿ ಇದುವರೆಗೂ ನಾವು ಕಲ್ಪಿಸಿಕೊಂಡಿರದ ಶಕ್ತಿ, ಬಲ, ಧೈರ್ಯ – ಇವುಗಳ ಮೂಲಸ್ರೋತವಿದೆ. ಪ್ರತಿಯೊಬ್ಬನೂ ಆಳದ ಈ ಸ್ತರಗಳಲ್ಲಿ ಅಡಗಿರುವ ಶಕ್ತಿಯನ್ನು ತನ್ನ ಪಾಲಿಗೆ ಬಂದಿರುವ ಅವಕಾಶವನ್ನು ಉಪಯೋಗಿಸಿಕೊಂಡೇ ಬಡಿದೆಬ್ಬಿಸುವ ಸಾಧ್ಯತೆಯಿದೆ" ಎನ್ನುತ್ತಾರೆ. ಭೌತವಿಜ್ಞಾನದ ಬೆಳವಣಿಗೆಯೊಂದಿಗೆ ವಿಜ್ಞಾನಿಗಳು ಮನುಷ್ಯನ ಬಗೆಗೆ ತಳೆದ ಭೌತಿಕ ಕಲ್ಪನೆ ಸಂಪೂರ್ಣವಾಗಿ ಸರಿಯಲ್ಲ ಎಂದು ಇಂದು ಸಾಬೀತಾಗಿದೆ.

ಏನೆಂದು ನಿರ್ದಿಷ್ಟವಾಗಿ ಹೇಳಲಾಗದಿದ್ದರೂ ಮನುಷ್ಯನಲ್ಲಿ ದೇಹಾತೀತವಾದ, ದೇಶ ಕಾಲ ನಿಯಮಗಳಿಗೆ ಅಧೀನವಾಗದ ಸತ್ಯವೊಂದು ಇದೆ. ಅಧ್ಯಾತ್ಮ ಮತ್ತು ಅದರ ಮಹತ್ವದ ತಿಳಿವು ಇಲ್ಲದಿದ್ದರೆ, ಕೇವಲ ಭೌತಿಕ ಜಗತ್ತಿನ ಜ್ಞಾನ ಮಾತ್ರವೇ, ಸ್ವಾರ್ಥ ಪರಾಯಣರಾದ ವ್ಯಕ್ತಿಗಳಿಗೆ ಪರದ್ರವ್ಯ ಅಪಹರಣ ಮಾಡುವ ಆಯುಧವಾಗಿ ಪರಿಣಮಿಸುವ ಸಂಭವವಿದೆ – ಬೆಂಕಿಗೆ ತುಪ್ಪವೆರೆದಂತೆ. ಆಗ ವ್ಯಕ್ತಿ ಇನ್ನೊಬ್ಬರನ್ನು ಶೋಷಣೆ ಮಾಡಿ ಬದುಕುವುದನ್ನು ಕಲಿಯುತ್ತಾನೆಯೇ ವಿನಾ ಪರಹಿತಕ್ಕಾಗಿ ತ್ಯಾಗಭಾವನೆಯನ್ನು ಬೆಳೆಸಿಕೊಳ್ಳಲಾರ ಎನ್ನುತ್ತಾರೆ, ಸ್ವಾಮಿ ವಿವೇಕಾನಂದರು. (ಮುಂದಿನ ಸಂಚಿಕೆಯಲ್ಲಿ : ಶ್ರದ್ಧೆ)